## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 02-09-2022

### ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 158/2022 ಕಲಂ 379 ಐಪಿಸಿ ;-

ದಿನಾಂಕ 01/09/2022 ರಂದು 2045 ಗಂಟೆಗೆ ಫಿರ್ಯಾದುದಾರರಾದ ಶ್ರೀ. ಸೈಯದ ನಾಸೇರ ಅರಫಾತ ಪಟೇಲ ತಂದೆ ಮಹ್ಮದ ಪಟೇಲಸಾಬ ವಯ:23 ವರ್ಷ ಜಾತಿ:ಮುಸ್ಲಿಂ ಉ:ವಿದ್ಯಾರ್ಥಿ ಸಾ/ದರ್ಗಾಪೂರಾ ಷಾಹಗಂಜ ಬೀದರ. ಇವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆಂದರೆ ಇವರ ತಂದೆಯವರು ಒಂದು ರೊಯಲ ಎನಫೀಲ್ಡ(ಬುಲೆಟ) ಮೊಟರ ಸೈಕಲ ನಂ. ಕೆಎ38ವೈ0157 ನೇದನ್ನು 2021 ಸಾಲೀನಲ್ಲಿ ಖರೀದಿಸಿ ಅದನ್ನು ಇವರ ಹೆಸರಿಗೆ ನೊಂದಾಯಿಸಿದ್ದು ಇರುತ್ತದೆ. ಹೀಗಿರುವಾಗ ದಿನಾಂಕ 31/08/2022 ರಂದು ಸಾಯಂಕಾಲ 7:00. ಪಿ.ಎಮ್. ಗಂಟೆಗೆ ಮೊಟರ ಸೈಕಲನ್ನು ಬ್ರಿಮ್ಸ್ ಕಾಲೇಜ ಆವರಣದಲ್ಲಿ ಕಾಲೇಜಿನ ಗೇಟಿನ ಹತ್ತೀರ ನಿಲ್ಲಿಸಿ ಕಾಲೇಜಿನಲ್ಲಿ ಹೋಗಿ, ಕಾಲೇಜಿನಲ್ಲಿ ನಡೆದ ಶ್ರೀಗಣೇಶ ಕಾರ್ಯಕ್ರಮ ಮುಗಿಸಿಕೊಂಡು 10:00 ಪಿ.ಎಮ್. ಗಂಟೆಯ ಸಮಯಕ್ಕೆ ಬಂದು ನೋಡಿದಾಗ ಮೊಟರ ಸೈಕಲ ಇದ್ದಿರುವದಿಲ್ಲ. ಕಳ್ಳತನವಾದ ಮೊಟರ ಸೈಕಲ ವಿವರ ಹೀಗಿರುತ್ತದೆ: ರೊಯಲ ಎನಫೀಲ್ಡ(ಬುಲೆಟ) ಮೊಟರ ಸೈಕಲ ನಂ.KA38Y0157 ಚಾ.ನಂ. E3U3K5F1MB852437 ಇಂಜಿನ ನಂ. U3K5F1MB022013 ಮಾಡಲ್: 2021 ಇದ್ದು ಅಂದಾಜು ಕಿಮ್ಮತ್ತು ರೂ- 105,000/-ರೂ ಆಗಿರುತ್ತದೆ. ಕಾರಣ ದಿನಾಂಕ 31/08/2022 ರಂದು ಸಾಯಂಕಾಲ 7:00.ಪಿ.ಎಮ. ಗಂಟೆಯಿಂದ 10:00 ಪಿ.ಎಮ್. ಗಂಟೆಯ ಅವಧಿಯಲ್ಲಿ ಬ್ರಿಮ್ಸ್ ಕಾಲೇಜ ಮುಂದೆ ನಿಲ್ಲಿಸಿದ ರೊಯಲ ಎನಫೀಲ್ಡ(ಬುಲೆಟ) ಮೊಟರ ಸೈಕಲ ನಂ. ಕೆಎ38ವೈ0157 ನೇದನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಹುಮನಾಬಾದ ಸಂಚಾರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 81/2022 ಕಲಂ 279, 304(ಎ) ಐಪಿಸಿ ಜೊತೆ 187 ಐಎಮ್.ವಿ. ಕಾಯ್ದೆ :-

ದಿನಾಂಕ: 01/09/2022 ರಂದು 15:30 ಗಂಟೆಗೆ ಫಿರ್ಯಾಧಿ ಶ್ರೀ ನವೀನ ತಂದೆ ಚಂದ್ರಪ್ಪಾ ಶೇರಿಕಾರ ವಯ 26 ವರ್ಷ ಜಾತಿ ಲಿಂಗಾಯತ ಉ: ಮೇಕ್ಯಾನಿಕ ಕೆಲಸ ಸಾ: ನಂದಗಾವ ತಾ: ಹುಮನಾಬಾದ ಇವನು ಠಾಣೆಗೆ ಹಾಜರಾಗಿ ಮೌಖಿಕವಾಗಿ ಹೇಳಿಕೆ ನೀಡಿದ ದೂರಿನ ಸಾರಾಂಶವೆನೆಂದರೆ. ದಿನಾಂಕ; 01/09/2022 ರಂದು ಮಧ್ಯಾಹ್ನ 02:10 ಗಂಟೆಯ ಸುಮಾರಿಗೆ ಫಿರ್ಯಾದಿಯು ಹುಮನಾಬಾದ ಗಾರೇಜನಲ್ಲಿ ಇದ್ದಾಗ ಕಾಕನ ಮಗ ಪ್ರಕಾಶ ಇವರು ಫೋನಮಾಡಿ ಮಾಹಿತಿ ತಿಳಿಸಿದ್ದೇನೆಂದರೆ. ನಿಮ್ಮ ತಂದೆಯಾದ ಚಂದ್ರಪ್ಪಾ ಇವರ ಹುಡುಗಿ ಗ್ರಾಮದ ಶ್ರೀ ಕರಿಬಸವೇಶ್ವರ ಹೋಟಲ್ ಎದುರುಗಡೆ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-65 ಮೇಲೆ ರಸ್ತೆ ಅಪಘಾತವಾಗಿರುತ್ತದೆ. ಅಂತ ದೂರವಾಣಿ ಮುಂಖಾತರ ತಿಳಿಸಿದ ಮೇರೆಗೆ ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ ಚಂದ್ರಪ್ಪಾ ತಂದೆ ಚನ್ನಪ್ಪಾ ಸಾ: ನಂದಗಾವ ಇವರು ರೋಡಿನ ಮೇಲೆ ಬಿದ್ದಿರುವದನ್ನು ನೋಡಲಾಗಿ ಅವರಿಗೆ ಟೊಂಕದ ಮೇಲೆ ಭಾರಿ ರಕ್ತಗಾಯ, ಬಲಗಡೆ ಮೊಳಕಾಲಿಗೆ ತರಚಿದ ರಕ್ತಗಾಯ, ಮೂಗಿನ ಮೇಲೆ ತರಚಿದ ರಕ್ತಗಾಯ ಎಡಗಡೆ ತಲೆಗೆ ತರಚಿದ ರಕ್ತಗಾಯ,ಎಡಗಡೆ ಮೊಳಕೈಗೆ ತರಚಿದ ರಕ್ತಗಾಯ ವಾಗಿರುತ್ತದೆ. ಫಿರ್ಯಾದಿ ತಂದೆಯವರು ತಮ್ಮ ಸೈಕಲ್ ಮೇಲೆ ಹೊಲಕ್ಕೆ ಬರುವಾಗ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-65ರ ಹುಡುಗಿ ಗ್ರಾಮದ ಶ್ರೀ ಕರಿಬಸವೇಶ್ವರ ಹೋಟಲ್ ಎದುರುಗಡೆ ಅಂದಾಜು ಮಧ್ಯಾಹ್ನ 02:00 ಗಂಟೆಗೆ ಸುಮಾರಿಗೆ ಒಂದು ಟಿಪ್ಪರ ಹುಮನಾಬಾದ ಕಡೆಯಿಂದ ಅತೀವೇಗ ಹಾಗೂ ನಿಷ್ಕಾಳಜೀತನದಿಂದ ಚಲಾಯಿಸಿಕೊಂಡು ಬಂದು ಸೈಕಲ್ ಮೇಲೆ ರಸ್ತೆ ದಾಟುತ್ತಿರುವ ಚಂದ್ರಪ್ಪ ರವರಿಗೆ ಡಿಕ್ಕಿ ಮಾಡಿರುತ್ತಾನೆ ಇದರಿಂದ ಫಿರ್ಯಾದಿಯ ತಂದೆ ಭಾರಿ ರಕ್ತಗಾಯವಾಗಿರುತ್ತದೆ. ನಂತರ ಅಪಘಾತ ಪಡಿಸಿದ ಟಿಪ್ಪರ ನೋಡಲಾಗಿ ಟಿಪ್ಪರ ಸಂಖ್ಯೆ KA398524 ನೇದ್ದು ಇರುತ್ತದೆ. ಅಪಘಾತದ ನಂತರ ಟಿಪ್ಪರ ಚಾಲಕ ತನ್ನ ಟಿಪ್ಪರರನ್ನು ಅಪಘಾತ ಸ್ಥಳದಲ್ಲಿ ಬಿಟ್ಟು ಓಡಿ ಹೋಗಿರುತ್ತಾನೆ ನಂತರ ಖಾಸಗಿ ವಾಹನದಲ್ಲಿ ಹಾಕಿಕೊಂಡು ಚಿಕಿತ್ಸೆ ಕುರಿತು ಹುಮನಾಬಾದ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಬಂದಾಗ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳು ಪರೀಕ್ಷಿಸಿ ನೋಡಿ ಅವರು ನಿಮ್ಮ ತಂದೆಯವರು ದಾರಿ ಮಧ್ಯ ಮೃತಪಟ್ಟಿರುತ್ತಾರೆ, ಅಂತ ಮಧ್ಯಾಹ್ನ 03:00 ಗಂಟೆಗೆ ತಿಳಿಸಿರುತ್ತಾಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.